# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 21.04.2022 ರಂದು ಬೆಳಿಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಯಶವಂತಪುರ ಉಪ ವಿಭಾಗ, 2ನೇ ಮಹಡಿ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ (ಆರ್‌ಟಿಓ ಕಾಂಪ್ಲೆಕ್ಸ್), ಯಶವಂತಪುರ ಇಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಹೇಮ ಎಸ್.ಟಿ. | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ॥ ಅನುಷಾ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 4 | ಶ್ರೀಮತಿ ಶಶಿಕಲಾ | ಸಹಾಯಕ ಕಂದಾಯ ಅಧಿಕಾರಿ, ಯಶವಂತಪುರ | ಸದಸ್ಯರು | ಹಾಜರಿದ್ದರು |
| 5 | ಪ್ರಕಾಶ್ | ಮೌಲ್ಯಮಾಪಕರು, | ಸದಸ್ಯರು | ಹಾಜರಿದ್ದರು |
| 6 | ಸಾಗರ್ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ | ಸದಸ್ಯರು | ಹಾಜರಿದ್ದರು |
| 7 | ಅನಿಲ್ ಕುಮಾರ್ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 8 | ಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 9 | ಎಂ. ಚೇತನ್ ಕುಮಾರ್ | ವಾಲ್ವ್‌ಮ್ಯಾನ್ | ಸದಸ್ಯರು | ಹಾಜರಿದ್ದರು |
| 10 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಆರೋಗ್ಯ :

ವ್ಯಾಕ್ಸಿನೇಷನ್ 85% ಕೊಡಲಾಗಿದೆ. ಆಸ್ಪತ್ರೆಯಲ್ಲಿ ಡೆಂಗ್ಯೂ ಪ್ರಕರಣಗಳು ದಾಖಲಾತಿ ಇರುವುದಿಲ್ಲ. ಟೆಸ್ಟಿಂಗ್ ನಿಲ್ಲಿಸಲಾಗಿದೆ. ವಿಟಮಿನ್ ಸ್ಟಾಕ್, ಮೆಡಿಸನ್ಸ್ ಸ್ಟಾಕ್ ಇರುವುದು. ವೈದ್ಯಾಧಿಕಾರಿಗಳು ಸುಣ್ಣದಗೂಡು ಪ್ರದೇಶದಲ್ಲಿ ಕ್ಯಾಂಪನ್ನು ಆಯೋಜಿಸಿ ಅದರಲ್ಲಿ ಇಂಧ್ರಧನುಷ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.

2) ಬೀದಿ ವ್ಯಾಪಾರ :

ರಸ್ತೆ ಬದಿಯಲ್ಲಿ ಪ್ಯಾಸೆಂಜರ್ ಆಟೋಗಳನ್ನು ಬಳಕೆ ಮಾಡಿ ವ್ಯಾಪಾರ ಮಾಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರಿಂದ ಟ್ರಾಫಿಕ್ ಪೋಲೀಸರು ಅವರನ್ನು ತೆರೆವುಗೊಳಿಸಿರುತ್ತಾರೆ.

3) ಕಂದಾಯ ಇಲಾಖೆ :

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಂದಾಯ ಇಲಾಖೆಯವರಿಗೆ ಎ ಖಾತೆ ಮತ್ತು ಬಿ ಖಾತೆಗಳ ಅಗತ್ಯವಾದ ಮಾಹಿತಿಯನ್ನು ವಾರ್ಡ್ ಇಂಜಿನಿಯರ್ಸ್ ಗಳಿಗೆ ನೀಡಬೇಕೆಂದು ತಿಳಿಸಿದ್ದಾರೆ.

4) ಬಿಡಬ್ಲ್ಯೂಎಸ್ಎಸ್‌ಬಿ :

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಾಡೆಲ್ ಕಾಲೋನಿ 2ನೇ ಅಡ್ಡರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿಯ ಖಾಲಿ ಜಾಗದಲ್ಲಿ ಯಥೇಚ್ಛವಾಗಿ ಗಿಡಗಳು ಬೆಳೆದಿರುವುದರಿಂದ ಹಾವು, ಚೇಳು, ಇಲಿ, ಹೆಗ್ಗಣಗಳು ಹೆಚ್ಚಾಗಿದ್ದು, ಅವುಗಳು ಅಕ್ಕಪಕ್ಕದಲ್ಲಿರುವ ಮನೆಗಳು ಹಾಗೂ ವಾರ್ಡ್ ಕಛೇರಿಗಳಿಗೆ ನುಗ್ಗುತ್ತಿರುವುದು ಕಂಡುಬಂದು ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಅದರಂತೆ, ಸಭೆಗೆ ಹಾಜರಿದ್ದ ಬಿಡಬ್ಲ್ಯೂಎಸ್ಎಸ್‌ಬಿ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು. ಹಾಗೂ ಮ್ಯಾನ್‌ಹೋಲ್‌ಗಳ ಬಗ್ಗೆ ಮಾಹಿತಿಯನ್ನು ವಾರ್ಡ್ ಸಂಬಂಧಿತ ಸಹಾಯಕ ಅಭಿಯಂತರರಿಗೆ ಬಿಬಿಎಂಪಿ ರವರಿಗೆ ತಿಳಿಸುವಂತೆ ಹೇಳಿದರು.

5) ಬೆಸ್ಕಾಂ :

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸಮುದಾಯ ಭವನ, ಕೋವಿಡ್ ಆಸ್ಪತ್ರೆ, ಜಿಮ್ ಕಟ್ಟಡ, ವಾಡ್ ಕಛೇರಿಗಳ ಬಿಲ್ಲುಗಳನ್ನು ಪಾವತಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಹಾಯಕ ಅಭಿಯಂತರರಾದ ಅನಿಲ್ ಕುಮಾರ್ ರವರು ತಿಳಿಸಿದರು. ಅದರಂತೆ, ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಅದಿಕಾರಿಗಳಿಗೆ ಕೂಡಲೇ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Hema S.T
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎನ್.ಜಿ. ಉಮೇಶ್)
ಸ.ಕಾ.ನಿ.ಅ. ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37